ಸ. ರಘುನಾಥ

ಕಲೆ: ವಾಗೀಶ ಹೆಗಡೆ

# ನಾಳೆಯಾದರೂ ನಿದ್ದೆ ಬರಲಿ



ಹೊತ್ತು ಹುಟ್ಟುವ ಹೊತ್ತು ಬದುಕು ಹೊತ್ತು
ರಾತ್ರಿ ದನಗಳ ಮುಂದೆ ಮೇವು ಹಾಕಿ
ಜಗುಲಿ ಹತ್ತಿ ಕೇಳಿದಳು 'ಚುಕ್ಕಿಗಳೇ
ಬಾನು ಚಂದಿರನ ಮುಡಿಯಲು ಇನ್ನೆಷ್ಟು ಹೊತ್ತು?'

'ಬರದೆ ಇರುವನೆ ಬರುವ ಹೊತ್ತು?
ಬರುವ ಸೂಚನೆ ಕೊಡುವ ಕಳುಹಿ ಬೆಳ್ಗದಿರು.'
ತಂಪು ಬೀಸುತ ಗಾಳಿ ಹೇಳಿತು 'ಬಾಲೆ,
ಕನಸು ಕಳಿಸಲು ಕೇಳೆ ಸಿದ್ಧಳಾಗು.'

ಮದನಸುಂದರ ಚಂದ್ರ ನಸುನಕ್ಕು ಅಂದ
ಕಳುಹಿದ ಕನಸು ನಿನ್ನೆದೆಗೆ ಬರಲದಕೆ
ನಿದ್ದೆ ದಾರಿ ಕೊಡಬೇಡ ಬಾಲೆ
ಒಳಹೋಗಿ ಉಂಡು ಮಲಗೆ ನಿಶ್ಚಿಂತೆ.

ತಮ್ಮರಸ ಕಳಿಸುವ ಕನಸಿನುಡುಗೊರೆಯ
ಚಂದ ನೋಡಲು ಚುಕ್ಕಿಗಳು ಕಾತರಿಸಿ
ಅವಳ ಭಾಗ್ಯವ ನೆನೆಯುತ್ತ ಅವಳು
ಹಾಸಿಗೆ ಬರಲು ಕಾಯುತ್ತಲಿರುತಿರಲು,

ಉಂಡು ತೊಳೆದಿಟ್ಟು ಮುಸುರೆ ಪಾತ್ರೆ
ಮಲಗಿದವಳ ಚಿತ್ತದಲಿ ಮಳೆ ಬೆಳೆಯ ಚಿಂತೆ.
ಕನಸುಗಳ ಕನಕಭರಣಿಯ ತೆರೆಯೆ ಕಾದು ದಣಿದು
ನಾಳೆಯಾದರು ನಿದ್ದೆ ಬರಲೆಂದು ಹರಸಿದ.